Volume 2, Issue 10 October 2016 ISSN NO: 2454 - 2326

# North Asian International Research Journal Consortium

## *North Asian International Research Journal Of Multidisciplinary*

Chief Editor
Dr. Nisar Hussain Malik

Publisher
Dr. Bilal Ahmad Malik

Associate Editor
Dr.Nagendra Mani Trapathi

CIF IMPACT FACTOR: 4.465

NAIRJC JOURNAL PUBLICATION

North Asian
International
Research Journal Consortium



# Welcome to NAIRJC

ISSN NO: 2454 - 2326

North Asian International Research Journal is a multidisciplinary research journal, published monthly in English, Hindi, Urdu all research papers submitted to the journal will be double-blind peer reviewed referred by members of the editorial board. Readers will include investigator in Universities, Research Institutes Government and Industry with research interest in the general subjects

## Editorial Board


| | | |
|---|---|---|
| J.Anil Kumar<br>Head Geography University of Thirvanathpuram | Sanjuket Das<br>Head Economics Samplpur University | Adgaonkar Ganesh<br>Dept. of Commerce, B.S.A.U Aruganbad |
| Kiran Mishra<br>Dept. of Engligh,Ranchi University, Jharkhand | Somanath Reddy<br>Dept. of Social Work, Gulbarga University. | Rajpal Choudhary<br>Dept. Govt. Engg. College Bikaner Rajasthan |
| R.D. Sharma<br>Head Commerce & Management Jammu University | R.P. Pandday<br>Head Education Dr. C.V.Raman University | Moinuddin Khan<br>Dept. of Botany SinghaniyaUniversity Rajasthan. |
| Manish Mishra<br>Dept. of Engg, United College Ald.UPTU Lucknow | K.M Bhandarkar<br>Praful Patel College of Education, Gondia | Ravi Kumar Pandey<br>Director, H.I.M.T, Allahabad |
| Tihar Pandit<br>Dept. of Environmental Science, University of Kashmir. | Simnani<br>Dept. of Political Science, Govt. Degree College Pulwama, University of Kashmir. | Ashok D. Wagh<br>Head PG. Dept. of Accountancy, B.N.N.College, Bhiwandi, Thane, Maharashtra. |
| Neelam Yaday<br>Head Exam. Mat.K..M .Patel College Thakurli (E), Thane, Maharashtra | Nisar Hussain<br>Dept. of Medicine A.I. Medical College (U.P) Kanpur University | M.C.P. Singh<br>Head Information Technology Dr C.V. Rama University |
| Ashak Husssain<br>Head Pol-Science G.B, PG College Ald. Kanpur University | Khagendra Nath Sethi<br>Head Dept. of History Sambalpur University. | Rama Singh<br>Dept. of Political Science A.K.D College, Ald.University of Allahabad |


**Address: -North Asian International Research Journal Consortium (NAIRJC) 221 Gangoo, Pulwama, Jammu and Kashmir, India -192301, Cell: 09086405302, 09906662570, Ph. No: 01933-212815, Email: nairjc5@gmail.com, info@nairjc.com Website: www.nairjc.com**

# DALIT VRUTTIGALU MATTU PARAMPARIK PRAJNE

**DR. Y. A.DEVARUSHI***

*Assistant professor Dept of Kannada C.B.College BHALKI, Dist: BIDAR,Karnatak state 585328

## ದಲಿತ ವೃತ್ತಿಗಳು ಮತ್ತು ಪಾರಂಪರಿಕ ಪ್ರಜ್ಞೆ

ಭಾರತ ದೇಶದ ಈ ನೆಲದಲ್ಲಿ ಪ್ರಾಚೀನ ಕಾಲದಿಂದ ದಲಿತ ಜನಾಂಗ ತನ್ನದೆ ಆದ ಸಾಮಾಜಿಕ ವ್ಯವಸ್ಥೆಯನ್ನು ರೂಪಿಸಿಕೊಂಡು ನೆಲೆ ನಿಂತ ಬಗೆ ವಿಶಿಷ್ಟವಾದದ್ದು.ಈ ದೇಶದಲ್ಲಿ ದಲಿತ ಜನಾಂಗ ತಲೆತಲಾಂತರದಿಂದ ಶೋಷಣೆಗೆ ಒಳಗಾಗುತ್ತ ಬಂದದ್ದು ಕಂಡುಬರುತ್ತದೆ. 'ದಲಿತ' ಎಂಬ ಪದದ ಅರ್ಥವನ್ನು ಸಾಮಾನ್ಯವಾಗಿ ಎರಡು ರೀತಿಯಲ್ಲಿ ವಿವರಿಸಬಹುದು. ಒಂದು ಎಲ್ಲ ಜಾತಿ ಜನಾಂಗಗಳಲ್ಲಿರುವ ಶೋಷಿತ ಜನ ದಲಿತರು ಎಂದು, ಮತ್ತೊಂದು ಯಾರು ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಒಳಗಾಗಿದ್ದಾರೊ ಅವರು. ಅಸ್ಪೃಶ್ಯ ಜನಾಂಗಕ್ಕೆ ಭಾರತದಾದ್ಯಂತ ಹೊಂದಿಕೆಯಾಗುವ ಒಂದೇ ಒಂದು ಪದ ಎಂದರೆ 'ದಲಿತ'. ಕನ್ನಡ ನಿಘಂಟಿನ ಪ್ರಕಾರ "ದಲಿತ ಎಂದರೆ ಹಿಂದುಳಿದವರು, ದಮನಕ್ಕೊಳಗಾದವರು. ಆರ್ಥಿಕವಾಗಿ ಕೆಳಮಟ್ಟಕ್ಕಿದ್ದವರು ಎಂಬ ಅರ್ಥಗಳಿವೆ"೧ ಡಾ. ಅಂಬೇಡ್ಕರ ಅವರು ಕೂಡ ತಮ್ಮ "ಸಾಹಿತ್ಯದುದ್ದಕ್ಕೂ ಡಿಪ್ರೆಸ್ಡ್ ಎಂದರೆ ದಲಿತ ಎಂದು ಬಳಸಿದ್ದಾರೆ"೨

"ದಲಿತ ಎಂದರೆ ಅನುಸೂಚಿತ ಜಾತಿ, ಉಪಜಾತಿ, ಬೌದ್ಧ, ದುಡಿಯುವ ಜನ, ಕಾರ್ಮಿಕ, ಭೂಹೀನ, ಕೂಲಿಕಾರ, ಬಡರೈತ, ಸಂಚಾರಿ ಜನಾಂಗ, ಆದಿವಾಸಿ ಇತ್ಯಾದಿಅರ್ಥಗಳಿವೆ"೩ "ಡಾ. ಅರವಿಂದ ಮಾಲಗತ್ತಿಯವರು ದಲಿತ ಪದದ ಅರ್ಥವನ್ನು ಈ ಕೆಳಗಿನಂತೆ ಮೂರು ಪ್ರಕಾರವಾಗಿ ವಿಂಗಡಿಸಿದ್ದಾರೆ"೪

೧) ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ. ಅರ್ಥಿಕ, ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಶೋಷಣೆಗೆ ಒಳಗಾದ ಎಲ್ಲ ಜನರು ದಲಿತರು.
೨) ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು.
೩) ಅಸ್ಪೃಶ್ಯರು ಸೇರಿದಂತೆ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ, ಅಸ್ಪೃಶ್ಯರ ಹಾಗೆ ಆರ್ಥಿಕ– ಸಾಮಾಜಿಕ– ರಾಜಕಿಯ ರಂಗಗಳಲ್ಲಿ ಶೋಷಣೆಗೆ ಒಳಗಾದ ಜನರು ದಲಿತರು.

ಡಾ, ಅರವಿಂದ ಮಾಲಗತ್ತಿಯವರ ಹೇಳಿಕೆ ಅತೀ ಸಮಂಜಸವಾದದ್ದು. "ಶತಮಾನಗಳಿಂದ ಜನ ಸಮೂದಾಯದಲ್ಲಿ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ ಊರ ಹೊರಗೆ ವಾಸಿಸುವ, ಕೀಳು ವೃತ್ತಿಗಳನ್ನು ಅವಲಂಬಿಸಿರುವ, ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ"೫ "ಆರ್ಥಿಕವಾಗಿ ದುರ್ಬಲನಾದವನು ಸಾಮಾಜಿಕವಾಗಿ ಶೋಷಣೆಗೆ ಒಳಗಾಗುತ್ತಾನೆ. ಆರ್ಥಿಕವಾಗಿ ಸದೃಢನಾಗಿದ್ದವನು ಸಾಮಾಜಿಕ ಶೋಷಣೆಯನ್ನು ಮಾಡುವ ಸಾಧ್ಯತೆಯನ್ನು ತಳ್ಳಿಹಾಕಲು ಸಾಧ್ಯವಿಲ್ಲ. ಇದರ ಜೊತೆಗೆ ಸಾಮಾಜಿಕ ಶೋಷಣೆ, ಅಸ್ಪೃಶ್ಯತೆ ಮತ್ತು ಕೀಳರಿಮೆಗೆ ಸಂಬಂಧಪಟ್ಟು ತಾವು ಕೀಳು ಜಾತಿಯವರೆಂದು ಕುಗ್ಗಿ ಹೋದ ಜನರ ದುರಂತ ಗಮನಾರ್ಹವಾದದ್ದು. ಆರ್ಥಿಕ ದುರ್ಬಲತೆಯಿಂದ ಹುಟ್ಟಿನ

ಕಾರಣದಿಂದ ಉಂಟಾದ ಸಾಮಾಜಿಕ ಶೋಷಣೆ ಇವೆರಡೂ ಮುಖ್ಯವಾಗುತ್ತವೆ. ಹೀಗೆ ದಲಿತ ಪದದ ಅರ್ಥ ವಿವರಣೆಯನ್ನು ಈ ದಿಕ್ಕಿನಲ್ಲಿಯೇ ವಿಚಾರಿಸುವುದು ಸೂಕ್ತವೆನಿಸುತ್ತದೆ"೬ ಡಾ. ಸಿದ್ಧಲಿಂಗಯ್ಯನವರು ದಲಿತರು ಎಂದರೆ ಯಾರು ಎಂಬುದರ ಬಗ್ಗೆ ಸವಿವರವಾದ ಹೇಳಿಕೆಗಳನ್ನು ನೀಡಿದ್ದಾರೆ. ಇವರ ಹೇಳಿಕೆ ದಲಿತ ಪದದ ಅರ್ಥವನ್ನು ಸಮಂಜಸವಾಗಿ ತಿಳಿಸುವಲ್ಲಿ ಸಫಲವಾಗಿದೆ.

ಎಲ್. ಹನುಮಂತಯ್ಯನವರು "ದಲಿತರು ಎಂದರೆ ಕೇವಲ ಶೋಷಿತರಷ್ಟೇ ಅಲ್ಲ. ಶೋಷಣೆಯ ಜೊತೆ ಅಮಾನವೀಯವಾದ ಹಿಂಸೆ, ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿತ್ವವೇ ಇರದವರಂತೆ ನಡೆಯಿಸಿಕೊಳ್ಳಲ್ಪಟ್ಟವರು"೭ ಎಂದು ಹೇಳಿದ್ದಾರೆ. ಜಾತಿ ಸಮೀಕ್ಷೆಯ ಪ್ರಕಾರ ಮುಟ್ಟಿದರೆ ಮೈಲಿಗೆಯಾಗುವ ೮೩೦ಕ್ಕೂ ಹೆಚ್ಚು ಜಾತಿಗಳು ಕರ್ನಾಟಕ ರಾಜ್ಯದಲ್ಲಿವೆ. ಅವುಗಳಲ್ಲಿ ಮುಖ್ಯವಾಗಿ ಹೊಲೆಯರು, ಮಾದಿಗರು, ಸಮಗಾರರು, ಡೋಹರರು, ದಾಸರು, ಡೊಕ್ಕಲಿಗರು, ಡೊಂಬರು, ಕಿಳ್ಳಿಕ್ಯಾತರು, ದುರುಗಮುರಗಿಯರು, ವಡ್ಡರು, ಕೊರವರು, ಸುಡುಗಾಡು ಸಿದ್ಧರು, ಪೋಚಮ್ಮರು, ಲಂಬಾಣಿಯರು, ಈಳಗೇರರು, ಹಕ್ಕಿಪಕ್ಕಿಗರು ಮುಂತಾದವರು.

ದಲಿತ ಎಂಬ ಪದ ಅನೇಕಾರ್ಥಗಳನ್ನು ಹೊಂದಿದೆ. ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಾಯಿ, ದಶ್ಯು, ಆದಿಮ ಜನಾಂಗ, ಪಂಚಮರು, ಆದಿಕರ್ನಾಟಕ, ಆದಿದ್ರಾವಿಡ, ಬಹಿಷ್ಕೃತರು, ಹರಿಜನರು, ಪರಿಶಿಷ್ಟ ಜಾತಿ ಎಂದು ಕರೆಯಲಾಗುತ್ತದೆ. ದಲಿತರು ಮಾಡುವ ವೃತ್ತಿಗಳು ಕೀಳು ವೃತ್ತಿಗಳಾಗಿದ್ದವು. ಅವರಿಗಾಗಿ ಕೆಲವು ವೃತ್ತಿಗಳು ಮೀಸಲಾಗಿದ್ದವು. ದಲಿತರು ಮಾಡುವ ವೃತ್ತಿಗಳನ್ನು ಇತರ ಜಾತಿಯ ಯಾರು ಮಾಡುತ್ತಿರಲಿಲ್ಲ. ದಲಿತರು ಮಡುವ ವೃತ್ತಿಗಳನ್ನು ತುಚ್ಯವೆಂದು ಇತರರು ಭಾವಿಸಿದ್ದರು. ದಲಿತ ಜನಾಂಗದಲ್ಲಿ ಬರುವ ಬೇರೆ ಬೇರೆ ಜಾತಿಗಳು ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಿದ್ದರು. ಆಯಾ ಜಾತಿಯ ಜನರು ಆಯಾ ವೃತ್ತಿಗಳನ್ನೆ ಕೈಗೊಳ್ಳುತಿದ್ದರು, ಕೆಲವೊಂದು ದಲಿತ ಜಾತಿಗಳು ಕೈಗೊಳ್ಳುತಿದ್ದ ವೃತ್ತಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ದಲಿತ ಜನಾಂಗದಲ್ಲಿ ಪ್ರಮುಖ ಜಾತಿ **ಹೊಲೆಯರು** ಇವರು ಕೆಲವೊಂದು ಅನುವಂಶಿಕ ವೃತ್ತಿಗಳನ್ನು ಮಾಡುತಿದ್ದರು. ಶ್ರೀಮಂತರ ಮನೆಯ ಅಂಗಳದ ಕಸವನ್ನು ಬೆಳಗ್ಗೆ ಮತ್ತು ಸಂಜೆ ಗೂಡಿಸುವುದು, ದನದ ಕೊಟ್ಟಿಗೆಯ ಹೆಂಡಿ ಕಸ ತೆಗೆಯುವುದು, ದನಕರುಗಳನ್ನು ಕಾಯುವುದು, ಹೊಲ ಕಾಯುವುದು, ಜಾತ್ರೆ ಉತ್ಸವಗಳ ಸಂದರ್ಭದಲ್ಲಿ ಗುಡಿಗಳನ್ನು ಸ್ವಚ್ಛಗೊಳಿಸುವುದು, ಹಂದರ ಹಾಕುವುದು, ಗ್ಯಾಸಗಳನ್ನು ಹಿಡಿಯುವುದು, ದೀವಟಿಗೆ ಹಿಡಿಯುವುದು, ಸತ್ತ ಪ್ರಾಣಿಗಳನ್ನು ಎಳೆಯುವುದು ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡುತಿದ್ದರು. ಅಲ್ಲದೆ ರೈತರ ಹೊಲದಲ್ಲಿ ಬೆಳೆದ ಬೆಳೆಗಳನ್ನು ಕಾಯುವುದು, ಹಕ್ಕಿ ಹೊಡೆಯುವುದು, ಹಕ್ಕಲಾ ಆಯುವುದು, ರಾಶಿ ಕಣ ಸಿದ್ಧಪಡಿಸುವುದು, ಹಂತಿ ಹೊಡೆಯುವುದು, ಮಣ್ಣಕಾಳ ಬಳಿದುಕೊಳ್ಳುವುದು, ಇತ್ಯಾದಿ ವೃತ್ತಿಗಳನ್ನು ಮಾಡುತಿದ್ದರು. ಅಲ್ಲದೆ ರೈತರ ಭೂಮಿಯಲ್ಲಿ ಕೂಲಿ ಕೆಲಸ ಮಾಡುವುದು. ರೈತರ ಭೂಮಿಯನ್ನು ಪಾಲಿನಿಂದ ಮಾಡುವುದು. ಬೇವಿನ ಬೀಜಗಳನ್ನು ಆರಿಸುವುದು. ಕಟ್ಟಿಗೆ ಮಾರುವುದು. ಹುಲ್ಲು ಮಾರುವುದು ಇತ್ಯಾದಿ ಕೆಲವು ವೃತ್ತಿಗಳ್ಳನ್ನೂ ಸಹ ಮಾಡುತಿದ್ದರು.

ದಲಿತ ಜನಾಂಗದಲ್ಲಿ **ಸುಡುಗಾಡು ಸಿದ್ಧರೂ** ಪ್ರಮುಖರು. ಇವರು ವಂಶಪಾರಂಪರಿಕವಾಗಿ ಬಳುವಳಿಯಾಗಿ ಬಂದ ಕಸಬು ಮಾಡುತ್ತಾರೆ. ಸುಡುಗಾಡು ಸಿದ್ಧರ ವೇಷ ಹಾಕಿ ಭಿಕ್ಷೆ ಬೇಡಿ ಬದುಕುವುದೆ ಇವರ ಕಾಯಕ. ಅಲ್ಲದೆ ಸಣ್ಣಪುಟ್ಟ ಕಾಯಿಲೆಗಳಿಗೆ ಗಿಡಮೂಲಿಕೆಗಳ ಔಷಧಗಳನ್ನು ಕಡಿಮೆ ಬೆಲೆಗೆ ಕೊಡುತ್ತಾರೆ. ಇವರ ಮತ್ತೊಂದು ವೃತ್ತಿ ಬೇಟೆಯಾಡುವುದು. ವಾರದಲ್ಲಿ ಕನಿಷ್ಟ ಎರಡು ಮೂರು ದಿವಸ ಊರ ಹೊರಗಿನ ಹೊಳೆ, ಹಳ್ಳ, ಗುಡ್ಡಗಳಿಗೆ ಬೇಟೆಯಾಡಲು ಹೊಗಿ ನರಿ, ಮೊಲ, ಮೀನು, ಕಾಡು ಹಂದಿ, ಏಡಿ, ಕೌಜುಗ, ಪಾರಿವಾಳ ಮುಂತಾದ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುತ್ತಾರೆ. ಸುಡುಗಾಡು ಸಿದ್ಧರ ಮಹಿಳೆಯರು ಕೂದಲು, ಹಳೆ ಕಬ್ಬಿಣ, ಪ್ಲಾಸ್ಟಿಕ್ ಸಂಗ್ರಹಿಸುತ್ತಾರೆ. ಮಕ್ಕಳ ಆಟಿಕೆ ಸಾಮಾನುಗಳನ್ನು ಮಾರುತ್ತಾರೆ, ಚಾಪೆ ಹೆಣೆಯುವುದು ಮತ್ತು ಕೌದಿ ಹೊಲಿಯುವುದು ಸಿದ್ಧ ಮಹಿಳೆಯರ ಮುಖ್ಯ ವೃತ್ತಿಗಳಾಗಿವೆ.

**ಮಾದಿಗರು** ವಂಶ ಪಾರಂಪರಿಕವಾಗಿ ಬಂದಿರುವ ಚರ್ಮಕ್ಕೆ ಸಂಬಂಧಿಸಿದ ಕೆಲಸಗಳನಷ್ಟೆ ಅಲ್ಲದೆ ಬೇರೆ ಬೇರೆ ವೃತ್ತಿಗಳನ್ನು ಮಾಡುತ್ತಾರೆ. ಸತ್ತ ಪ್ರಾಣಿಯ ಚರ್ಮ ಸುಲಿದು ಒಣಗಿಸಿ ಅದನ್ನು ಹದಗೊಳಸಿ ಆ ಚರ್ಮದಿಂದ ಹಗ್ಗ, ಮಿಣಿ, ಬಾರು ಮಟ್ಟಿ ಮುಂತಾದ ಸಾಮಗ್ರೀಗಳನ್ನು ತಯಾರಿಸಿ ರೈತರಿಗೆ ಕೊಟ್ಟು ಅವರಿಂದ ದವಸ ಧಾನ್ಯ ಪಡೆಯುತ್ತಾರೆ. ಅಲ್ಲದೆ ತಾವು ತಯಾರಿಸಿದ ವಸ್ತುಗಳನ್ನು ಸಂತೆ ಜಾತ್ರೆಗಳಲ್ಲಿ ಮಾರಾಟ ಮಾಡುತ್ತಾರೆ. ಚರ್ಮದಿಂದ ಚಪ್ಪಲಿಗಳನ್ನು ತಯಾರಿಸುತ್ತಾರೆ. ಉಡದ ಚರ್ಮದಿಂದ ದಿಮಡಿ ವಾದ್ಯ, ಕುರಿ ಕೋಣದ ಚರ್ಮದಿಂದ ಹಲಗೆ ತಯಾರಿಸುತ್ತಾರೆ. ಇವರಲ್ಲಿ ಮಾಂಗ ಎಂಬ ಪಂಗಡ ಇದೆ, ಇವರು ಎಮ್ಮೆ ಬೋಳಸುವ ವೃತ್ತಿ ಮಡುತ್ತಾರೆ.

**ಡಕ್ಕಲಿಗರು** ಮಾಡುವ ವೃತ್ತಿಗಳು ಭಿನ್ನವಾಗಿವೆ. ಇವರು ಕತ್ತೆ, ಹಂದಿ, ನಾಯಿ, ಕುರಿ, ಕೋಳ ಮುಂತಾದ ಪ್ರಾಣಿಗಳನ್ನು ಸಾಕುತ್ತಾರೆ. ಇವರ ಹೆಂಗಸರು ಶಿಂದಿ ಪೊರಕೆಯಿಂದ ಚಾಪೆ ಹೆಣೆಯುತ್ತಾರೆ. ಗಂಡಸರು ಪಾರಿವಾಳ, ಕೌಜುಗ, ಬುರಲ ಮುಂತಾದ ಪಕ್ಷಿಗಳನ್ನು ಹಿಡಿದು ಮಾರಾಟ ಮಾಡುತ್ತಾರೆ. ಸಮಗಾರರ ಸ್ತ್ರೀ-ಪುರುಷರು ಮಡುವ ಪ್ರಮುಖ ವೃತ್ತಿ ಚರ್ಮಗಾರಿಕೆ. ಇವರು ಚರ್ಮವನ್ನು ಸಂಪ್ರದಾಯಿಕ ರೀತಿಯಲ್ಲಿ ಹದಗೊಳಸಿ ಬಾರಕೋಲು, ಮಿಣಿ, ಬಾರ, ಚಪ್ಪಲ, ಗೆಜ್ಜೆಸರ, ಹಣೆಕಟ್ಟು ಮುಂತಾದ ವಸ್ತುಗಳನ್ನು ತಯಾರಿಸಿ ಸಂತೆ ಜಾತ್ರೆಗಳಲ್ಲಿ ಮಾರಾಟ ಮಾಡಿ ಹಣ ಸಂಪದಿಸುತ್ತಾರೆ.

ಹೊಲೆಯ, ಮಾದಿಗ, ಸಮಗಾರ, ಮುಂತಾದವುಗಳ ಹಾಗೆ ಪರಿಶಿಷ್ಟ ಜಾತಿಗೆ ಸೇರಿದ ಮತ್ತೊಂದು ದಲಿತ ಜಾತಿ **ಡೋಹರರು**. ಡೋಹರ ಎಂದರೆ ತೊಗಲಿಗೆ ಬಣ್ಣ ಹಾಕುವುದು ಎಂದರ್ಥ. ಇವರು ಮಾಡುವ ವೃತ್ತಿಗಳು ವಂಶ ಪಾರಂಪರಿಕವಾಗಿ ಬಂದ ವೃತ್ತಿಗಳಾಗಿವೆ. ಇವರು ಹಸಿ ಚರ್ಮಕ್ಕೆ ಸುಣ್ಣ ಮತ್ತು ಉಪ್ಪು ಸವರಿ ಚರ್ಮವನ್ನು ಸುಣ್ಣದ ಡೋಣಿಯಲ್ಲಿ ನೆನೆಯಲು ಹಾಕುತ್ತಾರೆ. ಚರ್ಮವನ್ನು ಅನೇಕ ರೀತಿಯಲ್ಲಿ ಹದಗೊಳಸಿ ಸಮಗಾರರಿಗೆ ಅಥವಾ ಮಾದಿಗರಿಗೆ ಮಾರಾಟ ಮಾಡುತ್ತಾರೆ.

**ಡೊಂಬರು** ಇವರು ಬಿದಿರನ್ನು ಸೀಳ ಹೆಣೆಯುವುದು, ಹುಲ್ಲಿನಿಂದ ಹಗ್ಗ ಹೊಸೆಯುವುದು, ಚಾಪೆಗಳನ್ನು ಹೆಣೆಯುವುದು, ಅಲ್ಲದೆ ಡೊಂಬರ ಆಟವನ್ನು ಪ್ರದರ್ಶನ ಮಾಡಿ ಹಣ ಸಂಪಾದಿಸುತ್ತಾರೆ. ಇವರು ಸಣ್ಣ ಸಣ್ಣ ಪ್ರಾಣಿಗಳನ್ನು ಬೇಟೆಯಾಡುತ್ತಾರೆ. **ಕೊರವರು** ಸನಾದಿ ಊದುವುದು, ಕತ್ತೆಯ ಮೇಲೆ ಉಪ್ಪಿನ ಚೀಲ ಹೇರಿಕೊಂಡು ಮಾರಾಟ ಮಾಡುವುದು, ಶಿಂದಿ ಮರದ ಗರಿಗಳ ಕಟ್ಟಿಗೆಯಿಂದ ಹೆಂಡಿ ಕಸದ ಬುಟ್ಟಿ, ಗೊಬ್ಬರ ಹಾಕುವ ಬುಟ್ಟಿ, ಕೋಳ ಮುಚ್ಚುವ ಬುಟ್ಟಿಗಳನ್ನು ತಯಾರಿಸುತ್ತಾರೆ. ಅಲ್ಲದೆ ನೆಲವು ಮಾಡುವುದು, ಕಸಬರಿಗೆ ಕಟ್ಟುವುದು, ಹಂದಿಗಳನ್ನು ಸಾಕುವುದು, ಹಚ್ಚೆ ಹಾಕುವುದು, ಶಕುನ(ಕಣಿ) ಹೇಳುವುದು, ಇಲಿ ಹಿಡಿಯುವುದು, ಬೇಟೆಯಾಡುವುದು, ಔಷಧ ಮಾರುವುದು ಮುಂತಾದ ವೃತ್ತಿಗಳಲ್ಲಿ ನಿರತರಾಗಿರುತ್ತಾರೆ.

**ಕಿಳ್ಳಿಕ್ಯಾತರು** ಪ್ರಾಚೀನ ಕಾಲದಿಂದಲೂ ಎರಡು ಪ್ರಮುಖ ಕೆಲಸ ಮಾಡುತ್ತ ಬಂದಿದ್ದಾರೆ. ಒಂದು ಮೀನು ಹಿಡಿಯುವುದು, ಮತ್ತೊಂದು ತೊಗಲು ಗೊಂಬೆ ಆಡಿಸುವುದು. **ವಡ್ಡರು** ಸಾಮಾನ್ಯವಾಗಿ ತಮ್ಮ ಮೂಲ ವೃತ್ತಿ ಕಲ್ಲು ಮಣ್ಣಿನ ಕೆಲಸ ಮಾಡುತ್ತಾರೆ. ಕಲ್ಲು ಗಣಿಗಳಲ್ಲಿ ಕಲ್ಲು ಕೊರೆಯುವುದು, ಕೆರೆಗಳಗೆ ಒಡ್ಡು ಹಾಕುವುದು, ಬಾವಿ ತೋಡುವುದು, ಕಲ್ಲು ಒಡೆಯುವುದು, ಉಪ್ಪು ತಯಾರಿಸುವುದು, ಬೀಸುಕಲ್ಲು ಕೆತ್ತುವುದು, ಕಲ್ಲಿನಲ್ಲಿ ಮೂರ್ತಿಗಳನ್ನು ಕೆತ್ತುವುದು, ಕಲ್ಲು ಮಣ್ಣಿನಿಂದ ಮನೆಗಳನ್ನು ನಿರ್ಮಿಸುವುದು, ಇವು ವಡ್ಡರು ಮಾಡುವ ಪಾರಂಪರಿಕ ವೃತ್ತಿಗಳಾಗಿವೆ.

ದಲಿತ ಜನಾಂಗದ ವಿವಿಧ ಜಾತಿಯ ಜನರು ವಂಶ ಪಾರಂಪರಿಕವಾಗಿ ಬಂದ ವೃತ್ತಿಗಳನ್ನು ಮಾಡುತ್ತ, ಅಲ್ಪ ಆದಾಯದಿಂದ ಜೀವನ ಬಂಡಿ ಸಾಗಿಸುತ್ತ ಬಂದಿದ್ದಾರೆ. ಇವರು ಮಾಡುವ ವೃತ್ತಿಗಳು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಸಾಗಿ ಬಂದಿವೆ. ಒಂದು ಜಾತಿಯ ಕುಟುಂಬದ ಹಿರಿಯ ತನ್ನ ಮಕ್ಕಳಗೆ ತಮ್ಮ ಜಾತಿಯ ವೃತ್ತಿಗಳ ಬಗ್ಗೆ ಹೇಳ ಕೊಡುತ್ತಾನೆ. ಅಲ್ಲದೆ ತಾನು ಮಾಡುವ ವೃತ್ತಿಯ ಜ್ಞಾನವನ್ನು ಅವರಿಗೆ ನೀಡುತ್ತಾನೆ. ಮುಂದಿನ ಜೀವನದಲ್ಲಿ ಅವರು ಅದೇ ವೃತ್ತಿ ಕೈಗೊಳ್ಳುತ್ತಾರೆ. ದಲಿತ ವೃತ್ತಿಗಳು ತಲೆ ತಲಾಂತರದಿಂದ ಮುಂದುವರಿದುಕೊಂಡು ಬರಲು ಪಾರಂಪರಿಕ ಜ್ಞಾನವೇ ಕಾರಣ. ತಮ್ಮ ಜಾತಿಯವರು ಮಾಡುವ ಉದ್ಯೋಗ ಕಲಿಯಲು ಅವರು ತಮ್ಮ ಮಕ್ಕಳನ್ನು ಯಾವ ತರಬೇತಿ ಶಾಲೆಗೆ ಸೇರಿಸಬೇಕಾದ ಅವಶ್ಯಕತೆಯಿಲ್ಲ. ಮಕ್ಕಳು ತಂದೆ-ತಾಯಂದಿರು ಮಾಡುವ ವೃತ್ತಿಗಳನ್ನು ನೋಡಿ ಕಲಿತುಕೊಂಡು

ಉದ್ಯೋಗ ಪ್ರಾರಂಭಿಸುತ್ತಾರೆ. ವೃತ್ತಿಯ ಬಗ್ಗೆ ತಂದೆ ತಾಯಿಗಳು ಮಾರ್ಗದರ್ಶನ ನೀಡುತ್ತಾರೆ. ಹೀಗೆ ದಲಿತ ವೃತ್ತಿಗಳು ಪಾರಂಪರಿಕ ಪ್ರಜ್ಞೆಯಿಂದ ಮುಂದುವರೆದುಕೊಂಡು ಬಂದಿವೆ. ಆದರೆ ಇಂದಿನ ಆಧುನಿಕ ಯುಗದಲ್ಲಿ ದಲಿತರು ಶಿಕ್ಷಣ ಪಡೆದು ವಿದ್ಯಾವಂತರಾಗಿ ಪಾರಂಪರಿಕ ವೃತ್ತಿಗಳಿಗೆ ತಿಲಾಂಜಲಿ ಹೇಳಿ ಆಧುನಿಕ ಉದ್ಯೋಗಗಳಲ್ಲಿ ತೊಡಗಿದ್ದಾರೆ. ದಲಿತ ಜನಾಂಗದ ಯುವಪೀಳಿಗೆ ಸುಶಿಕ್ಷಿತರಾಗಿ ಸರಕಾರಿ ನೌಕರಿಗಳಿಗೆ ಸೇರಿ ಸೇವೆ ಸಲ್ಲಿಸುತ್ತಿದ್ದಾರೆ. ಇಂದಿನ ಯುವಕರು ತಮ್ಮ ಜಾತಿ ವೃತ್ತಿಗಳನ್ನು ಮಾಡಲು ಸಿದ್ಧರಿಲ್ಲ. ಈ ಕಾರಣದಿಂದ ಇಂದು ಅನೇಕ ಪಾರಂಪರಿಕ ವೃತ್ತಿಗಳು ಕಣ್ಮರೆಯಾಗಿವೆ.

**ಅಡಿಟಿಪ್ಪಣಿಗಳು:**

೧) ಕನ್ನಡ ಸಾಹಿತ್ಯ ಪರಿಷತ್ತ ನಿಘಂಟು: ಸಂಪುಟ-೪: ಪುಟ-೩೮೨೮

೨) ದಲಿತ ಸಾಹಿತ್ಯ ಕೆಲವು ಚಿಂತನೆಗಳು: ದೇವಯ್ಯ ಹರವೆ: ಪುಟ-೧

೩) ಕರ್ನಾಟಕ ಭಾರತಿ ೨೪-೧: ಪುಟ-೧೨೫

೪) ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ: ಡಾ. ಅರವಿಂದ ಮಾಲಗತ್ತಿ: ಪುಟ-೩

೫) ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ: ಡಾ. ಅರವಿಂದ ಮಾಲಗತ್ತಿ: ಪುಟ-೩

೬) ಹಕ್ಕಿ ನೋಟ: ಡಾ. ಸಿದ್ಧಲಿಂಗಯ್ಯ: ಪುಟ-೭೭-೭೮

೭) ದಲಿತ ಲೋಕದ ಒಳಗೆ: ಎಲ್. ಹನುಮಂತಯ್ಯ: ಪುಟ-೨-೩

# Publish Research Article

Dear Sir/Mam,

We invite unpublished Research Paper,Summary of Research Project,Theses,Books and Book Review for publication.

**Address:- North Asian International Research Journal Consortium (NAIRJC)**
**221, Gangoo Pulwama - 192301**
**Jammu & Kashmir, India**
**Cell: 09086405302, 09906662570,**
**Ph No: 01933212815**
**Email: nairjc5@gmail.com, info@nairjc.com**
**Website: www.nairjc.com**

